# ತಾಳು ತಾಳೆಲೊ ರಂಗಯ್ಯ ನೀ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 64.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 269.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 114
4. **Note:** Ankita is different in both the above books. We have considered Ref.1 as standard and taken that Ankita for listing.
5. **Note:** Lyrics given without highlights are as per Ref. 2. The wordings as per Ref. 1 are mentioned in yellow highlights. The wordings in Ref. 3 are similar to Ref. 2.
6. **Note:** Singer has followed lyrics as in Ref. 2.

| | |
|---|---|
| ರಾಗ: ಶಂಕರಾಭರಣ ತಾಳ: ಆದಿ | ರಾಗ: ಹಿಂದೋಳ ತಾಳ: ಅಟ |
| | |
| ತಾಳು ತಾಳೆಲೋ ರಂಗಯ್ಯ ನೀ | ತಾಳು ತಾಳೆಲೋ ರಂಗಯ್ಯ ನೀ |
| ತಾಳು ತಾಳೆಲೋ ಕೃಷ್ಣಯ್ಯ ‖ ಪ ‖ | ತಾಳು ತಾಳೆಲೋ ಕೃಷ್ಣಯ್ಯ |
| | |
| ನಾಳೆ ನಮ್ಮನೆಗೆ ಬಂದರೆ ನಿನ್ನ | ನಾಳೆ ನೀನು, ನಮ್ಮ ಮನೆಗೆ ಬಂದರೆ |
| ಕಾಲ ಕಂಭಕೆ ಕಟ್ಟಿ ಹೇಳುವೆ ಗೋಪಿಗೆ ‖ ಅಪ ‖ | ಕಾಲ ಕಂಭಕೆ ಕಟ್ಟಿ ಪೇಳುವೆ ಗೋಪಿಗೆ |
| | |
| ದೊರೆಗಳ ಮಗನೆಂಬುದಕೇನೋ, ಬಹು | ದೊರೆಗಳ ಮಗನೆಂಬುದಕೇನೋ, ಬಹು- |
| ದೂರದಿ ಮನೆ ಪೊಕ್ಕ ಪರಿಯೇನೋ | ಧುರದಿ ಮನೆಯ ಪೊಕ್ಕ ಪರಿಯೇನೊ |
| ದುರುಳ ಬುದ್ಧಿ ನಿನಗೆ ತರವೇನೋ, ಹಿಂದೆ | ದುರುಳತನದ ಬುದ್ಧಿ ಸರಿಯೇನೊ, ನೀನು |
| ತಿರುಗಿ ಬೇಡ್ಯುಂಡದ್ದು ಮರೆತ್ಯೇನೋ ‖ ೧ ‖ | ತಿರಿದು ಬೇಡುಂಡದ್ದು ಮರೆತಯೇನೊ |
| | |
| ಚಿಕ್ಕ ಮಕ್ಕಳು ಹೋದರು ಎಂದು ನೀ | ಚಿಕ್ಕ ಮಕ್ಕಳು ಇಲ್ಲವಂತೇನೂ, ನಿನಗೆ |
| ಬಂದು ಕಕ್ಕುಲತೆಯ ಮಾಡುವರೇನೋ | ಕಕ್ಕುಲಾತಿಯಿಂದಲಿ ನಿನ್ನ |
| ಸಿಕ್ಕಿದ ಗೋಪಾಲ ಹಿಡಿ ಹಿಡಿ ಎಂದರೆ, ನೀನು | ಸಿಕ್ಕಿದ ಶ್ರೀಲೋಲ ಹಿಡಿ ಹಿಡಿಯೆಂದರೆ, |
| ಬಿಕ್ಕಿ ಬಿಕ್ಕಿ ಅತ್ತರೆ ಬಿಡುವರೇನೋ, ರಂಗ ‖ ೨ ‖ | ಬಿಕ್ಕಿ ಬಿಕ್ಕಿ ಅತ್ತರೆ ಬಿಡುವರೇನೊ |
| | |
| ಕಟ್ಟಿದಾಕಳ ಮೊಲೆಗಳುಂಡು ಕರು | ಕಟ್ಟಿದ್ದ ತುರುಗಳ ಮೊಲೆಯುಂಡು, ಕರು |
| ಬಿಟ್ಟು ಹೇಳುವುದೇನೆಲೋ ರಂಗ | ಬಿಟ್ಟ ಕಾರಣವೇನು, ಹೇಳೊ |
| ಸೃಷ್ಟಿಗೊಡೆಯ ಶ್ರೀ ಪುರಂದರ ವಿಠಲ ನೀ | ಸೃಷ್ಟೀಶ ಪುರಂದರ ವಿಠ್ಠಲ ರಾಯನೆ |

ಕಟ್ಟಲ್ಲಿ ನಿಂತ ಕಾರಣವೇನೊ, ರಂಗ || ೩ || ಇಟ್ಟಿಗೆಯ ಮೇಲೆ ಬಂದು ನಿಂತ ಕರಣವೇನೊ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಕೈಗೆ ಸಿಕ್ಕ ಕೃಷ್ಣನನ್ನು ತಡೆದು ನಿಲ್ಲಿಸಿ, ಗೋವಳಿತಿಯೊಬ್ಬಳು ಅವನಿಗೆ ಹೇಳಿದ ಮಾತುಗಳು ಈ ಹಾಡಿನಲ್ಲಿವೆ.

**ಧುರದಿ** = ಧೈರ್ಯದಿಂದ

**ತಿರಿದು** = ತಿರುಗಿ

**ತುರು** = ಹಸು, ಗೋವು

**ಕಕುಲಾತಿ** – ಕಕ್ಕುಲತೆ, ಪ್ರೀತಿಯಿಂದ ಒದಗುವ ಕಾತರ.

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, gopi, ittige, mane, ranga, arasa, makkalu, govu,
**Pravachana:** NA
**Explanation:** NA